ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 3, July-August 2026, Pp. 143-147
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಚನ ಸಾಹಿತ್ಯದಲ್ಲಿ ಮೌಲ್ಯಗಳು

**ಡಾ. ಜಗದೀಶ ಟಿ. ಎಲ್**
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಮಹಿಳಾ ಕಾಲೇಜು, ಹುಣಸೂರು, ಮೈಸೂರು ಜಿಲ್ಲೆ

***Abstract:***
*ವಚನ ಸಾಹಿತ್ಯವು ಕನ್ನಡದ ಭಕ್ತಿ, ಸಾಮಾಜಿಕ ಮತ್ತು ವೈಚಾರಿಕ ಪರಂಪರೆಯಲ್ಲಿ ಮಹತ್ವದ ಸ್ಥಾನವನ್ನು ಹೊಂದಿರುವ ಜನಮುಖಿ ಸಾಹಿತ್ಯ ಪ್ರಕಾರವಾಗಿದೆ. ವಚನಕಾರರು ತಮ್ಮ ಸಾಹಿತ್ಯದ ಮೂಲಕ ಸತ್ಯ, ಸಮಾನತೆ, ಕಾಯಕ, ದಾಸೋಹ, ಮಾನವೀಯತೆ, ಪ್ರಾಮಾಣಿಕತೆ ಮತ್ತು ನೈತಿಕತೆಯಂತಹ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ. ಜಾತಿ, ವರ್ಗ, ಲಿಂಗಭೇದ ಹಾಗೂ ಸಾಮಾಜಿಕ ಅಸಮಾನತೆಗಳನ್ನು ವಿರೋಧಿಸಿ ಸಮಾನತೆಯ ಸಮಾಜ ನಿರ್ಮಾಣದ ಆಶಯವನ್ನು ವಚನ ಸಾಹಿತ್ಯವು ಪ್ರತಿಪಾದಿಸುತ್ತದೆ. ಕಾಯಕವೇ ಕೈಲಾಸ ಎಂಬ ತತ್ವದ ಮೂಲಕ ಶ್ರಮದ ಗೌರವವನ್ನು ಮತ್ತು ದಾಸೋಹದ ಮೂಲಕ ಹಂಚಿಕೆಯ ಮನೋಭಾವವನ್ನು ಬೆಳೆಸುವ ಸಂದೇಶವನ್ನು ನೀಡಿದೆ. ವಚನಗಳಲ್ಲಿ ವ್ಯಕ್ತವಾಗುವ ಮಾನವೀಯ ಹಾಗೂ ಸಾಮಾಜಿಕ ಮೌಲ್ಯಗಳು ಇಂದಿನ ಸಮಾಜದಲ್ಲಿಯೂ ಪ್ರಸ್ತುತವಾಗಿದ್ದು, ವ್ಯಕ್ತಿತ್ವ ನಿರ್ಮಾಣಕ್ಕೆ ಮಾರ್ಗದರ್ಶನ ನೀಡುತ್ತವೆ. ಈ ಲೇಖನವು ವಚನ ಸಾಹಿತ್ಯದಲ್ಲಿ ಅಂತರ್ಗತವಾಗಿರುವ ಪ್ರಮುಖ ಮೌಲ್ಯಗಳನ್ನು ಕುರಿತು ಚರ್ಚಿಸುತ್ತದೆ.*

***Keywords:*** *ವಚನ ಸಾಹಿತ್ಯ, ಸಾಮಾಜಿಕ ಮೌಲ್ಯಗಳು, ಸಮಾನತೆ, ಕಾಯಕ, ದಾಸೋಹ*

**ಪೀಠಿಕೆ**

ಕನ್ನಡ ಸಾಹಿತ್ಯದ ಹಲವು ಮಜಲುಗಳಲ್ಲಿ ವಚನ ಸಾಹಿತ್ಯ ವಿಶಿಷ್ಟವಾದುದು. ಅದುವರೆವಿಗೂ ಜಿಡ್ಡು ಗಟ್ಟಿದ ವ್ಯವಸ್ಥೆಗೆ ಚುರುಕು ಮುಟ್ಟಿಸಿದ ಕಾಲ ಹನ್ನೆರಡನೆಯ ಶತಮಾನ. ಸಾಹಿತ್ಯ ರಾಜಾಶ್ರಯವನ್ನು ತೊರೆದು ಲೋಕಾಶ್ರಯವನ್ನು ಕಂಡುಕೊಂಡ ಸಮಯವದು. ಅಲ್ಲಿಯವರೆಗೆ ಅನೂಚಾನವಾಗಿ ಆವರಿಸಿಕೊಂಡಿದ್ದ ಪ್ರಭುತ್ವ, ಪುರೋಹಿತ, ಜಾತಿ ಪದ್ಧತಿಯ ವಿರುದ್ಧ ಧ್ವನಿ ಎತ್ತಿದರು. ಶರಣರು ಜಾತಿ ವಿಜಾತಿಯೆಂದು ಕೆಸರೆರಚಿಕೊಳ್ಳದೆ ಕಾಯಕತ್ವವನ್ನು ಹಂಚಿದರು, ಹರಡಿದರು. ಆದ್ದರಿಂದ ವಚನ ಸಾಹಿತ್ಯ ವಿಶ್ವಸಾಹಿತ್ಯಕ್ಕೆ ಕನ್ನಡದ ಅನನ್ಯ ಕೊಡುಗೆ.

ವಚನ ಧರ್ಮ ಸರ್ವಸಮಾನತೆಯಿಂದ ಕೂಡಿದ ಧರ್ಮದಂತಿದ್ದು ಅದು ಎಲ್ಲ ಜಾತಿ ಮತದ ಜನರನ್ನು ಒಂದೆಡೆ ಸೇರಿಸಿ ಅಭೇದ ಕಲ್ಪನೆಯಿಂದ ಲಿಂಗಧಾರಣೆ ಮಾಡುವುದರ ಮೂಲಕ ಕೈಲಾಸಪಥದ ಮಾರ್ಗವನ್ನರಿತರು. ಪ್ರತಿಯೊಬ್ಬರು ಸಂತೋಷ, ಸಹಕಾರ ಮತ್ತು ಸಮಾನ ಗುಣಗಳಿಂದ ಬೆರೆಯುವ ಅನುಭಾವಿ ಶರಣರ ತಂಡ ಕಲ್ಯಾಣದಲ್ಲಿ ಕಲೆಯಿತು. ಅದರ ಫಲವೇ ವಚನ ಸಾಹಿತ್ಯದ ಉದಯ. ಇದು ಅಸಹಕಾರದ, ಅಸಮಾನತೆಯಿಂದ ಜರ್ಜರಿತವಾದ ಸಮಾಜಕ್ಕೆ ತಂಪೆರೆಯುವ ಪ್ರಯತ್ನ ಮಾಡಿತು. ಬಸವಣ್ಣ, ಅಲ್ಲಮಪ್ರಭು ಅವರ ಮುಂದಾಳತ್ವದಲ್ಲಿ ನಡೆದ ವಚನ ಚಳುವಳಿ ದೇಶದ

***Please cite this article as:*** ಜಗದೀಶ, ಟಿ.ಎಲ್. (2026). ವಚನ ಸಾಹಿತ್ಯದಲ್ಲಿ ಮೌಲ್ಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(3), 143–147

ಉದ್ದಗಲಕ್ಕೂ ವ್ಯಾಪಿಸಿ ಜನ ಬೆಂಬಲವನ್ನು ಗಳಿಸಿತು. ಶಾಸ್ತ್ರ, ಆಚರಣೆ, ಸಂಪ್ರದಾಯದ ವಿರುದ್ಧ ದನಿಯೆತ್ತಿದ ವಚನಕಾರರು ಅಂತಹ ನಂಬಿಕೆಗಳ ವಿರುದ್ಧ ಸಿಡಿದೆದ್ದರು.

ಶಾಸ್ತ್ರ ಘನವೆಂಬೆನೆ ಕರ್ಮವ ಭಜಿಸುತ್ತಿದೆ ವೇದ ಘನವೆಂಬೆನೆ ಪ್ರಾಣಿವಧೆಯ ಹೇಳುತ್ತಿದೆ ಸ್ಮೃತಿ ಘನವೆಂಬೆನೆ ಮುಂದಿಟ್ಟು ಅರಸುತ್ತಿದೆ ಅಲ್ಲೆಲ್ಲಿಯೂ ನೀವಿಲ್ಲದ ಕಾರಣ ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವಾ

ಬಸವಣ್ಣನ ವಚನ ಧರ್ಮ ಶಕ್ತಿಯುತವಾಗಿದ್ದುದರಲ್ಲಿ ಸಂಶಯವಿಲ್ಲ. ಹಾಗೆಯೇ ವಚನ ತತ್ವಕ್ಕೆ ಮಾರುಹೋದವರಿಗೆ ಲೆಕ್ಕವಿಲ್ಲ. ಇವರ ಆಚಾರ, ನಡೆ, ಸರಳತೆ, ಆದರ್ಶ ಮತ್ತಿತರ ಅಂಶಗಳು ಸರ್ವಮತದ ಜನರನ್ನು ಆಕರ್ಷಿಸಿಸಿದವು. ಅಲ್ಲಮ, ಬಸವಣ್ಣನ ಮುಖಂಡತ್ವದಲ್ಲಿ ನಡೆದ ವಚನ ಚಳುವಳಿ ಮೇರೆದಪ್ಪಿದ ಹೆದ್ದೊರೆಯಾಗಿ ಹರಿಯಿತು. ಅದು ಅನ್ಯಧರ್ಮಿಯರ ಹುಬ್ಬೇರಿಸುವಂತೆ ಮಾಡಿತು. ವೇದ ಉಪನಿಷತ್ತುಗಳ ಜಾಲದಲ್ಲಿ ಸಿಲುಕಿ ತೊಳಲಾಡಬೇಡಿರಿ. ಅದು ನಿಮಗೆ ಸ್ಪಷ್ಟ ಗುರಿಯನೀಡಲಾರದು. ಅನುಭಾವತ್ವವನ್ನು ಹೊಂದಲು ನೀವು ಶರಣತ್ವವನ್ನು ಸ್ವೀಕರಿಸಿ ಶಾಶ್ವತ ಮುಕ್ತಿಯನ್ನು ಪಡೆಯಿರಿ ಎಂದು ಜನರನ್ನು ಎಚ್ಚರಿಸಿದರು. ಸರಳ ನುಡಿಗಳಿಂದ ಜನರನ್ನು ತನ್ನತ್ತ ಸೆಳೆದುಕೊಳ್ಳುವ ವಚನಕಾರರ ಮನೋಧರ್ಮ ನೇರವಾದುದು ಮತ್ತು ದಿಟ್ಟವಾದುದು.

ಆ ಕಾಲಘಟ್ಟದಲ್ಲಿ ವೈದಿಕ ಮತದ ತತ್ವಗಳು ಸಮಾಜಕ್ಕೆ ಭಾರವಾಗಿದ್ದವು. ಅವುಗಳ ವಿಜೃಂಭಣೆಯ ಆಚರಣೆಗೆ ಅಕ್ಕನ ಮಾತು ಕೊಡಲಿಪೆಟ್ಟೇ ಸರಿ! ವೇದಶಾಸ್ತ್ರಾಗಮ ಪುರಾಣಗಳೆನ್ನುವ ಕೊಟ್ಟಣವ ಕುಟ್ಟುತ್ತಾ ನುಚ್ಚು, ತೌಡುಕಾಂಬೋ ಅವನ್ನು ಕುಟ್ಟಲೇಕೆ? ಅತ್ತಿತ್ತ ಹರಿವ ಮನದ ಶಿರವನರಿಯ ಬಲ್ಲಡೆ ಬಟ್ಟ-ಬಯಲು ಚೆನ್ನ ಮಲ್ಲಿ ಕಾರ್ಜುನಾ.

ವೇದಶಾಸ್ತ್ರ ಪುರಾಣಗಳ ಕೊಟ್ಟಣವ ಕುಟ್ಟುತ್ತಾ ನುಚ್ಚು, ತೌಡನ್ನು ನಿರೀಕ್ಷಿಸುವ ಬದುಕು ವ್ಯರ್ಥ! ಮನದ ಚಾಂಚಲ್ಯವನ್ನು ಅರಿಯದ ಓದು ವ್ಯರ್ಥ. ಮನೋಮಯದ ಮೂರ್ತಿಯನ್ನು ತಿಳಿಯುವ ಪ್ರಯತ್ನ ಆಗಬೇಕು. ಅದರಿಂದ ಮನಸ್ಸನ್ನು ಹದಗೊಳಿಸಿ

ಶಿವತತ್ವವನ್ನು ಪಡೆಯುವ ಬಗೆಯನ್ನು ಬೆಸೆಸುವೆವು. ಸಕಲಧರ್ಮಗಳ ಸಾರವನ್ನು ಹುಡುಕುವ ಶರಣತತ್ವದ ಸಿಹಿಯನ್ನು ಹಂಚುವ ಹೊಣೆಗಾರಿಕೆ ನಮ್ಮದಾಗಿದೆ. ಇದು ಅಕ್ಕನು ವಚನತತ್ವವನ್ನು ಪ್ರತಿಪಾದಿಸಿ ಮಾಡುವ ಪರಿಯಿದು.

ಬಸವಣ್ಣನ ಜಾತ್ಯತೀತವಾದ ನಿಲುವನ್ನು ಸ್ಪಷ್ಟಪಡಿಸಲು ಉಪನಯನ ಸಂದರ್ಭದಲ್ಲಿ ಬ್ರಾಹ್ಮಣತ್ವವನ್ನು ತೊರೆದು ಜನಿವಾರವನ್ನು ತ್ಯಜಿಸಿ ನೆಂಟರು ಬಂಧುಗಳ ಬಂಧುತ್ವವನ್ನು ಬದಿಗೊತ್ತಿದನು. ಅವನಿಗೆ ಡೋಹರ ಕಕ್ಕಯ್ಯನು ಅಪ್ಪನಂತೆ ಕಾಣುವನು. ಮುತ್ತಯ್ಯ ಚನ್ನಯ್ಯನಾದರೆ ನಾನು ಬದುಕುವೆ. ಅಲ್ಲದೆ ಶ್ವಪಚನ ಸನಿಹದಲ್ಲಿದ್ದು ಸದ್ಗುಣವ ಅರಿವೆನು. ಇಂತಹ ಕಷ್ಟಜಾತಿಯಲ್ಲಿ ಜನಿಸಿದ ನನಗೆ ಇದು ವಿಧಿಯೇ ಕೂಡಲಸಂಗಮದೇವಾ ಎಂದು ತನ್ನ ಅಂತರಂಗದಲ್ಲಿ ಅಡಗಿದ ನಿರ್ಮಲ ಮನಸ್ಸಿನ ಜಾತ್ಯಾತೀತ ತತ್ವವನ್ನು ಹೊರಗೆಡಹುತ್ತಾ ತನ್ನ ಆತ್ಮಾವಲೋಕನ ಮಾಡಿಕೊಳ್ಳುವುದು ಸರ್ವರನ್ನೂ ಆಕರ್ಷಿಸುತ್ತದೆ.

ಬಸವಣ್ಣನ ನಿಷ್ಕಲ್ಮಶ ಭಾವ ತನ್ನ ಅಂತರಂಗದ ಶೋಧನೆಯಾಗಿದೆ. ಉತ್ತಮ ಕುಲದಲ್ಲಿ ಜನಿಸಿದರೂ ಶ್ರೇಷ್ಠನೆಂಬ ಅಹಂಕಾರವಾಗಲೀ ಉತ್ತಮನೆಂಬ ಗರ್ವವಾಗಲೀ ಲವಲೇಶವೂ ಇದ್ದಂತಿಲ್ಲ. ಮೇಲು ಕುಲದ ಹುಟ್ಟು ಎಂಬ ಕಷ್ಟದ ಹೊರೆಯನ್ನು ಹೇರದೆ ಭಾರವನಿಳುಹು. ಕಕ್ಕಯ್ಯನು ಹೊಕ್ಕಿದನಿಕ್ಕನು ನೋಡಯ್ಯ ದಾಸಯ್ಯನು ಶಿವದಾನವ ಕೊಡನು ನೋಡಯ್ಯ. ಮನ್ನಣೆಗೆ ಹೆಸರಾದ ಚನ್ನಯ್ಯನು ನನ್ನನ್ನು ಮನ್ನಿಸಿಲ್ಲವೆಂದು ಹೇಳುವನು. ಸಮಾಜ ನಿರ್ಮಿತ ಜಾತಿಯನ್ನು ಅಲ್ಲಗಳೆದು ನಿಜಜಾತಿಯೆಂದರೆ ಅದು ಶಿವಜಾತಿ. ಕೂಡಲಸಂಗಮ ಈ ಶಿವತತ್ವ ಜಾತಿಗೆ

ಸರ್ವಜಾತಿಯ ಜನರನ್ನು ಸ್ವಾಗತಿಸುವನು. ಶರಣಜಾತಿಗೆ ಸಮನಾದ ಜಾತಿ ಇಹುದಿಲ್ಲ. ಶರಣಧರ್ಮಕ್ಕೆ ಮಿಗಿಲೆಂಬುದಿಲ್ಲ, ಬನ್ನಿರಿ ಮಹಾಮನೆಯ ಮಂಟಪಕೆ. ನಿಮ್ಮ ವೃತ್ತಿಯ ಶ್ರೇಷ್ಠತೆಯನುಳಿಸಿ ಕಾಯಕಕ್ಕೆ ಋಣಿಯಾಗಿರಿ. ಸಮಾಜದಲ್ಲಿ ತಪ್ಪುದಾರಿ ಹಿಡಿದವರಿಗೆ ಸರಿದಾರಿ ತೋರುವ ಭಾವಣಿಕೆ ಶರಣರದು. ಇಂತಹ ತತ್ವ ಸಾರ್ವಕಾಲಿಕವು, ಸಾರ್ವಜನಿಕವು, ಸರ್ವಾಂತರಾಮಿಯೂ ಆಗಿರುವುದು. ಶಿವಮನೆಗೆ ಶರಣರನ್ನು ಸೆಳೆದುಕೊಳ್ಳುವ ಸೆಳೆತ ಅವರಿಗಿತ್ತು.

ನಾನು ನನ್ನದೆನ್ನುವ ಮಮಕಾರವ ತೊರೆದು ನಾವು ನಮ್ಮದೆನ್ನುವ ಸಾರ್ವತ್ರಿಕತ್ವವ ಪಡೆವ ಮನಸ್ಸಿನಿಂದ ತಂಡೋಪತಂಡವಾಗಿ ಮಹಾಮನೆಗೆ ಬಂದರು. ಉತ್ತರದ ಕಾಶ್ಮೀರ ದೇಶದ ರಾಜನೂ ಸಹ ಕಲ್ಯಾಣದ ಬಿಜ್ಜಳರಾಜನ ಅರಮನೆಗೆ ಬಾರದೆ ಬಸವಣ್ಣನ ಮಹಾಮನೆಗೆ ಬರುತ್ತಿದ್ದುದು ಈ ಔನ್ನತ್ಯದಿಂದಲೇ. ಲಿಂಗದೀಕ್ಷೆಯ ಕೊಡಲು ದಕ್ಷಿಣದ ಬನ್ನೂರಿನವರೆಗೆ ಹರಿದುಬರುವ ಬಸವಣ್ಣ ದೇಶದ ಉದ್ದಗಲಕ್ಕೂ ಸಂಚರಿಸಿ ಶೈವತತ್ವದ ವಿಚಾರಧಾರೆಗಳನ್ನು, ಕಾಯಕತತ್ವದ ಮಹತ್ವವನ್ನು ಬಿತ್ತಿದನು. ತದನಂತರ ಅದು ಹುಲುಸಾಗಿ ಬೆಳೆಯಿತು.

ಶರಣರಲ್ಲಿ ಜಾತಿಕುಲ ಭೇದಗಳಿಲ್ಲವೆಂದರಿತು ಹೆಣ್ಣು ಕೊಟ್ಟು ತರುವ ಆಚರಣೆಯನ್ನು ತಂದರು. ಬ್ರಾಹ್ಮಣ ಮದುವರಸನ ಮಗಳು ಕಲಾವತಿಯನ್ನು ಹರಳಯ್ಯನ ಮಗ ಶೀಲನಿಗೆ ತಂದುಕೊಳ್ಳುವ ತೀರ್ಮಾನ ಒಂದು ಕ್ರಾಂತಿಕಾರಕ ಹೆಜ್ಜೆ. ಇಷ್ಟಲಿಂಗಧಾರಿಗಳಾಗಿದ್ದು ಜಾತಿಯಲ್ಲಿ ಶರಣರಾದ್ದ-ರಿಂದ ಸಮಾಜದಲ್ಲಿ ಸರ್ವಸಮಾನತೆಯನ್ನು ಕಂಡುಕೊಂಡರು. ಹನ್ನೆರಡನೆಯ ಶತಮಾನದಲ್ಲಿ ನಡೆದ ಈ ಬೆಳವಣಿಗೆಯಿಂದ ಬ್ರಾಹ್ಮಣರು ಬಿಜ್ಜಳನಿಗೆ ದೂರನ್ನಿತ್ತರು. ಪರಿಣಾಮವಾಗಿ ಹರಳಯ್ಯ ಮತ್ತು ಮಧುವರಸರನ್ನು ದಂಡಿಸಿದನು. ಇದು ಶರಣರು ಬಿಜ್ಜಳನ ಮೇಲಿನ ಕೋಪಕ್ಕೆ ನಾಂದಿ ಹಾಡಿತು ಎಂಬುದು ಬಸವಪುರಾಣದಲ್ಲಿ ಉಲ್ಲೇಖವಾಗಿದೆ.

ವರ್ಣಾಶ್ರಮ ಧರ್ಮವನ್ನು ವಿರೋಧಿಸಿ ಶೈವತತ್ವವನ್ನು ಪ್ರತಿಪಾದಿಸಿದ ಬಸವಣ್ಣ ಕಾಯಕತತ್ವಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟನು. ನಿಜವಾಗಿ ಹುಟ್ಟಿನಿಂದ ಜಾತಿಯಲ್ಲ. ಜೀವನೋಪಾಯಕ್ಕಾಗಿ ಕಂಡುಕೊಂಡ ವೃತ್ತಿಯೇ ಜಾತಿಯಾಯಿತು. ವೃತ್ತಿಯಲ್ಲಿ ಯಾವುದೂ ಕೀಳಿಲ್ಲ, ಮೇಲಿಲ್ಲ. ಜಾತಿಯು ವೃತ್ತಿಯಿಂದ ನಿರ್ಧಾರಿತವಾಗುವುದಿಲ್ಲ ಎಂದು ಬಗೆಬಗೆಯಾಗಿ ಸಾರಿದರು.

ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರುವನಾದ ಇದು ಕಾರಣ ಕೂಡಲಸಂಗಮದೇವಾ ಲಿಂಗಸಂಗವನರಿತವನೇ ಕುಲಜನು ಕೂಡಲ ಸಂಗಮದೇವಾ ಲಿಂಗಸಂಗವನರಿತವನೇ ಕುಲಜನು

ವೇದಶಾಸ್ತ್ರಕ್ಕೆ ಹಾರುವನಾಗಿ, ವೀರವಿತರಣಕ್ಕೆ ಕ್ಷತ್ರಿಯನಾಗಿ ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ, ಕೃಷಿಯ ಮಾಡುವುದಕ್ಕೆ ಶೂದ್ರನಾಗಿ, ಇಂತಹ ಜಾತಿ ಬಂಧದೊಳಗೆ ನೀಚ, ಉಚ್ಚ ಎಂಬ ಎರಡು ಕುಲವಲ್ಲದೆ ಹೊಲೆ ಹದಿನೆಂಟು ಜಾತಿ ಎಂಬ ಕುಲವಿಲ್ಲ: ಬ್ರಹ್ಮವನರಿದಲ್ಲಿ ಬ್ರಾಹ್ಮಣ ಸರ್ವಜೀವಹತ ಕರ್ಮಕಾರ್ಯನಿರತವಾದಲ್ಲಿ ಸಮ್ಮಕಾರ ರಾಮನಾ, ಎಂದು ಸಮಾಜದ ಜಾತಿವ್ಯವಸ್ಥೆಯನ್ನು ಬಯಲಿಗೆಳೆದಿದ್ದಾರೆ. ಶ್ರೇಣೀಕೃತ ಸಮಾಜದಲ್ಲಿ ಇರುವ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಹೋಗಲಾಡಿಸಿ, ನವಸಮಾಜ ನಿರ್ಮಾಣಕ್ಕೆ ನಾಂದಿ ಹಾಡಿದರು. ಆ ಸಂಧಿಗ್ಧ ಕಾಲದಲ್ಲಿ ವಚನಧರ್ಮ ಬೇರೂರಲು ಹೆಚ್ಚು ಕಾಲವನ್ನೇನೂ ತೆಗೆದುಕೊಳ್ಳಲಿಲ್ಲ. ಹಾಗಾಗಿ ಅವರ ಆದರ್ಶ, ಮನೋಧೋರಣೆ, ನಡವಳಿಕೆ, ಸಕಲವರ್ಗದವರ ಆಕರ್ಷಣೆ ವಿಷಯವಾಯಿತು. ಕಾಯಕತತ್ವ ಶ್ರೇಷ್ಠತೆಯನ್ನರಿತ ನುಲಿಯ ಚಂದಯ್ಯನ ಮಾತುಗಳಿವು.

ಕಾಯಕದಲ್ಲಿನಿರತನಾದಡೆ ಗುರುದರ್ಶನವಾದಡೂ ಮರೆಯಬೇಕು. ಲಿಂಗಪೂಜೆಯಾದರೂ ಮರೆಯ ಬೇಕು. ಜಂಗಮ ಮುಂದಿದ್ದಡೂ ಹಂಗು

ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು.

ಗುರುಲಿಂಗ ಜಂಗಮಕ್ಕೆ ಆದ್ಯತೆಯನಿತ್ತ ವಚನಕಾರರಲ್ಲಿ ಕಾಯಕತತ್ವವನ್ನು ಕುರಿತ ನುಲಿಯ ಚಂದಯ್ಯನ ಅಭಿಮತ ವಿಶಿಷ್ಟವಾದುದು. ಕಾಯಕದಲ್ಲಿ ತೊಡಗಿದಾಗ ಗುರುದರ್ಶನವಾದರೂ ಮರೆಯಬೇಕು ಎನ್ನುವುದರಲ್ಲಿ ಅಚಲ ನಿಷ್ಠೆಯಿದೆ. ಅವನ "ಕುಂದಣ ಶ್ರೀ" ಸ್ಮರಣ ಸಂಚಿಕೆ ಕಾರ್ಯತತ್ಪರತೆ, ಶ್ರಮಿಕ ನಿಷ್ಠೆಯ ಹೊರತು ಲಿಂಗ, ಜಂಗಮ ಮುಂದಿದ್ದರೂ ಮರೆಯಬೇಕೆನ್ನುವನು. ಅಮಳೇಶ್ವರ ಲಿಂಗದರ್ಶನವಾದರೂ ಕಾಯಕ ತೊರೆದು ಹೊರಳಬಾರದು. ಅದರಲ್ಲೇ ಕೈಲಾಸವನ್ನು ಕಾಣುವ ಬಗೆಯನ್ನು ಅರಿಯಬೇಕೆನ್ನುವ ಧೋರಣೆ ಅಡಗಿದೆ. ಮಡಿವಾಳ ಮಾಚಯ್ಯನ ವಚನಗಳಲ್ಲಿ ನಿರ್ದಾಕ್ಷಿಣ್ಯ ಸ್ವಭಾವವನ್ನು ಕಾಣಬಹುದು. ಅವನ ಭಾಷೆ ಬಹಳ ಹರಿತವೂ, ತೀಕ್ಷ್ಣಯುತವೂ ಆಗಿರುವುದು ವೇದ್ಯವಾಗುತ್ತದೆ. ವೇದ ವಿಪ್ರರ ಬೋಧೆ, ಶಾಸ್ತ್ರ ಸಂತೆಯ ಮಾತು ಪುರಾಣ ಪುಂಡರ ಗೋಷ್ಠಿ ಈ ವಚನದಲ್ಲಿ ಪರಂಪರೆಯಿಂದ ಬೆಳೆದುಬಂದ ಜನವರ್ಗ ಯಾವುದನ್ನು ಶ್ರೇಷ್ಠ ಎಂದು ಭಾವಿಸಿದ್ದರೋ ಅವುಗಳನ್ನು ಖಂಡಿಸಿದನು. ಶತಶತಮಾನಗಳ ದಬ್ಬಾಳಿಕೆಯ ವಿರುದ್ಧ ದನಿಯೆತ್ತಿದನು. ವಿರಕ್ತರಾದಿಯಾಗಿ ಶುದ್ಧ ಶೈವರು, ಲಿಂಗಾಂಗಿಗಳೆಂದು ಹುಬ್ಬುವವರು, ಕ್ಷುದ್ರದೈವಗಳು ಎಂದು ಇವರೆಲ್ಲರ ಬೂಟಾಟಿಕೆಗಳನ್ನು ಬಯಲಿಗೆಳೆದಿದ್ದಾನೆ. ಒಬ್ಬ ಸ್ವಾಭಿಮಾನಿಯ ನೇರ ಅಂತರಂಗ ಮಾತು ಯಾವುದೇ ಮುಚ್ಚುಮರೆಯಿಲ್ಲದೆ ನಿಷ್ಠೆಯ ಅಥವಾ ಪ್ರಾಮಾಣಿಕ ಬದುಕು ಅವನದು. ಶೋಷಿಸುವ ಸಮಾಜವನ್ನು ಕಂಡು ಉರಿಯುವ ಮಾಚಯ್ಯನು ಬಸವಣ್ಣನ ವ್ಯಕ್ತಿತ್ವಕ್ಕೆ ಕರಗುವನು.

ಇನ್ನು ಡಾಂಭಿಕ ಭಕ್ತರನ್ನು ಮತ್ತು ಸಮಾಜದಲ್ಲಿ ಹಾಸುಹೊಕ್ಕಾಗಿರುವ ಭವಿಗಳ ಆಡಂಬರವನ್ನು ಕಂಡ ಅಲ್ಲಮನ ನಿಷ್ಠುರ ನುಡಿಯಿದು.

ಆಸೆಗೆ ಸತ್ತುದು ಕೋಟಿ ಆಮಿಷಕ್ಕೆ ಸತ್ತುದು ಕೋಟಿ ಹೊನ್ನು ಹೆಣ್ಣು ಮಣ್ಣಿಂಗೆ ಸತ್ತುದು ಕೋಟಿ ಗುಹೇಶ್ವರಾ ನಿನಗಾಗಿ ಸತ್ತವನಾದರೂ ಕಾಣಾ

ಜನರು ಆಸೆ ಆಮಿಷಕ್ಕೆ ಸಾಯುವರು. ಅಲ್ಲದೆ ಹೆಣ್ಣು, ಹೊನ್ನು, ಮಣ್ಣಿಗೆ ಸಾಯುವವರು ಇದ್ದಾರೆ. ಆದರೆ ಗುಹೇಶ್ವರನಿಗಾಗಿ ಸಾಯುವ ಜನರನ್ನು ಕಾಣೆನೆಂದು ಹಂಬಲಿಸಿದ್ದಾರೆ. ಪ್ರಾಪಂಚಿಕ ಸುಖಗಳಿಗಾಗಿ ತವಕಿಸುವ ಜನರ ನಡುವೆ ಗುಹೇಶ್ವರನಿಗೋಸ್ಕರ ಬದುಕುವವರ ಕಾಣೆನು ಎಂದು ಹಲುಬುವನು.

ಒಟ್ಟಾರೆ ವಚನ ಸಾಹಿತ್ಯದ ಘಮಲು ನಾಡಿನಾದ್ಯಂತ ಹರಡಿ ಸಮಾಜವನ್ನು ಶುದ್ಧಿಗೊಳಿಸುವಲ್ಲಿ ಶ್ರಮಿಸಿತು. ಶರಣರು ತಮ್ಮ ತಮ್ಮ ಅನುಭವಗಳನ್ನು ಅನುಭವ ಮಂಟಪದಲ್ಲಿ ಅರುಹಿದರು. ಆ ಮೂಲಕ ಸಮಾಜದಲ್ಲಿ ನೆಲೆಯೂರಿದ್ದ ಹಲವು ಅನಿಷ್ಟಗಳನ್ನು ಹೋಗಲಾಡಿಸಿ ಉತ್ತಮ ಸಮಾಜವನ್ನು ನಿರ್ಮಿಸಲು ಪ್ರಯತ್ನಿಸಿದರು. ಅಸಮಾನತೆ, ಅಸಹಕಾರ, ಸ್ವಾರ್ಥ ಮುಂತಾದ ಅಪಮೌಲ್ಯಗಳನ್ನು ಕೊನೆಗಾಣಿಸಿ, ಉತ್ಕೃಷ್ಟ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ವಾತಾವರಣವನ್ನು ನಿರ್ಮಿಸಲು ವಚನಕಾರರು ಅಹರ್ನಿಶಿ ದುಡಿದರು.

## ಪರಾಮರ್ಶನ ಗ್ರಂಥಗಳು


- ಚಿದಾನಂದಮೂರ್ತಿ, ಎಂ. (2013). ಕನ್ನಡ ವಚನ ಸಾಹಿತ್ಯ. ಸಪ್ನ ಬುಕ್ ಹೌಸ್.
- ಹೂಗಾರ, ಎಂ. ಬಿ. (2012). ವಚನ ಸಾಹಿತ್ಯ. ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಕಲಬುರ್ಗಿ, ಎಂ. ಎಂ. (ಸಂ.). (2001). ಬಸವಣ್ಣನವರ ವಚನ ಸಂಪುಟ. ಕನ್ನಡ ಪುಸ್ತಕ ಪ್ರಾಧಿಕಾರ.
- ನಾಗಭೂಷಣ, ಸಿ. (2000). ಶರಣ ಸಾಹಿತ್ಯ–ಸಂಸ್ಕೃತಿ: ಕೆಲವು ಅಧ್ಯಯನಗಳು. ಕನ್ನಡ ಸಾಹಿತ್ಯ ಪರಿಷತ್ತು.

- ರಾಜೂರ, ವೀರಣ್ಣ. (ಸಂ.). (2021). ಬಸವಣ್ಣನವರ ವಚನ ಸಂಪುಟ. ಕನ್ನಡ ಪುಸ್ತಕ ಪ್ರಾಧಿಕಾರ.
- ಸಬರದ, ಬ. (2020). ವಚನ ಚಳುವಳಿ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು.
- ವಿದ್ಯಾಶಂಕರ, ಎಸ್. (ಸಂ.). (2001). ಸಂಕೀರ್ಣ ವಚನ ಸಂಪುಟ–2. ಕನ್ನಡ ಪುಸ್ತಕ ಪ್ರಾಧಿಕಾರ.